ಸದನದಲ್ಲಿ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ,ದಿನಾಂಕ : 25ನೇ ಜುಲೈ, 2019

9.ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದ ಬಳಕೆ ಹಾಗೂ ಮೇ-2014ರ ಮಾರ್ಗಸೂಚಿಗಳ ಬಗ್ಗೆ

ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) -

129 (780) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಮೇ-2014ರ ಪ್ರಕಾರ ಶಾಸಕರುಗಳಿಗೆ ಬಿಡುಗಡೆ ಮಾಡಿದ ಹಣವನ್ನು 2 ವರ್ಷಗಳ ಬಳಕೆ ಮಾಡದಿದ್ದಲ್ಲಿ ಅಂತಹ ಅನುದಾವನ್ನು ವಾಪಸ್ಸು ಅಥವಾ ರದ್ದು ಪಡಿಸುವುದು ನಿಜವೇ ;

(ಆ) ಶಾಸಕರುಗಳಿಗೆ ಬಿಡುಗಡೆ ಮಾಡಿದ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಬಳಕೆಯ ಕುರಿತು ಆಯಾ ನೋಡಲ್ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಶಾಸಕರುಗಳ ಸಭೆಯನ್ನು ಏರ್ಪಡಿಸಿ ಅನುದಾನದ ಬಳಕೆಯ ಕುರಿತು ಮಾಹಿತಿಯನ್ನು ತಿಳಿದುಕೊಳ್ಳಲು ರಿವ್ಯೂ ಮೀಟಿಂಗ್‌ನ್ನು ನಡೆಸುವಂತಹ ಪದ್ಧತಿ ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ ವರ್ಷದಲ್ಲಿ ಎಷ್ಟು ಬಾರಿ ಇಂತಹ ಸಭೆಗಳನ್ನು ಜಿಲ್ಲಾಧಿಕಾರಿಗಳು ಏರ್ಪಡಿಸಿರುವರು ; (ಮಾಹಿತಿ ನೀಡುವುದು)

(ಇ) ಈ ರೀತಿಯ ಕಾನೂನನ್ನು ಇದೇ ವರ್ಷದಿಂದ (2019) ಜಾರಿ ಮಾಡಲಾಗುತ್ತಿದೆಯೇ ? (ಮಾಹಿತಿ ನೀಡುವುದು)